# ಯುರೋಪ್‌ನ ಎಲ್ಲೆಯ ಹೊರಗೆ

ಆಯ್ಕೆ ಮಾಡುವಲ್ಲಿ ಜಾಣತನ ಹೊಂದಿರುವ ಯಾವುದೇ ಪ್ರವಾಸಿಗೆ ಯುರೋಪ್ ಕನಸಿನ ತಾಣವಾಗಿರುತ್ತದೆ. ಆದರೆ ಹೆಚ್ಚಿನ ಜನರಿಗೆ ಯುರೋಪ್ ಅಂದರೆ ಸ್ವಿಝರ್‌ಲ್ಯಾಂಡ್, ಫ್ರಾನ್ಸ್, ಇಂಗ್ಲಂಡ್, ಆಸ್ಟ್ರಿಯಾ, ಹಾಲಂಡ್ ಮತ್ತು ಇಟಲಿಗಳಷ್ಟೇ ಆಗಿರುತ್ತವೆ. ಯುರೋಪ್‌ಗೆ ಭೇಟಿ ನೀಡುವ ಹೆಚ್ಚಿನ ಪ್ರವಾಸಿಗರು ತಮ್ಮ ಮೊದಲ ಆದ್ಯತೆಯಾಗಿ ಈ ದೇಶಗಳಿಗೆ ಭೇಟಿ ನೀಡಲು ಬಯಸುತ್ತಾರೆ. ಆದರೆ ಈ ವಾಡಿಕೆಯ ದೇಶಗಳನ್ನು ಹೊರತುಪಡಿಸಿದರೆ, ಇನ್ನೂ ಪ್ರವಾಸಿಗರ ದಟ್ಟಣೆ ತುಂಬಿಲ್ಲದ ಬೇರೆ ಅನೇಕ ತಾಣಗಳೂ ಇರುತ್ತವೆ. ಕೇಸರಿ ಪ್ರವಾಸ ಯೋಜನೆಗಳ ಕನಸಿನ ಕೂಸಾದ ಸೆಂಟ್ರಲ್ ಯುರೋಪ್ ನಿಮ್ಮನ್ನು ಅನೇಕ ರಮ್ಯ ತಾಣಗಳಿಗೆ ಒಯ್ಯುತ್ತದೆ. ಈ ಪ್ರವಾಸದ ಕಾಲಾವಧಿಯು 15 ದಿನಗಳು ಹಾಗೂ 14 ರಾತ್ರಿಗಳಾಗಿದ್ದು ಇದು ಕ್ರೋಷಿಯಾ, ಸ್ಲೋವೇನಿಯಾ, ಹಂಗರಿ, ಸ್ಲೋವಾಕಿಯಾ, ಝೆಕ್ ರಿಪಬ್ಲಿಕ್, ಜರ್ಮನಿ ಮತ್ತು ಪೋಲೆಂಡ್‌ಗಳನ್ನು ಒಳಗೊಂಡು 7 ದೇಶಗಳ 13 ಮಹತ್ವದ ನಗರಗಳ ವೀಕ್ಷಣೆಯನ್ನು ಒಳಗೊಂಡಿರುತ್ತದೆ.

ಕ್ರೋಷಿಯಾ ಮಧ್ಯ ಹಾಗೂ ಈಶಾನ್ಯ ಯುರೋಪ್‌ನಲ್ಲಿ ಇರುತ್ತದೆ. ಈ ದೇಶವು 60 ಆಳವಾದ ಗುಹೆಗಳನ್ನು ಹೊಂದಿದೆ, ಇವುಗಳಲ್ಲಿ ಕೆಲವು ಗುಹೆಗಳು 3000 ಅಡಿಗಳಷ್ಟು ಆಳವಾಗಿವೆ. 10ನೇ ಶತಮಾನದಲ್ಲಿ ಬೆಳವಣಿಗೆ ಕಂಡ ಕ್ರೋಷಿಯಾ ದೇಶದ ರಾಜಮನೆತನವು 2 ಶತಮಾನಗಳ ಕಾಲ ಆಳ್ವಿಕೆ ನಡೆಸಿತು. ಮಧ್ಯ ಯುರೋಪಿನ ಬೇರೆ ದೇಶಗಳಿಗೆ ಹೋಲಿಕೆ ಮಾಡಿದಲ್ಲಿ, ಕ್ರೋಷಿಯಾ ಸಾಹಿತ್ಯ, ಶಿಕ್ಷಣ, ಬದುಕುವ ಕಾಲಾವಧಿ ಮತ್ತು ಸಂಪತ್ತಿನ ಹಂಚಿಕೆಯಲ್ಲಿ ಮೊದಲ ಸ್ಥಾನದಲ್ಲಿ ಇರುತ್ತದೆ. ಯುರೋಪಿಯನ್ ವೇಷಭೂಷಣದ ಶೈಲಿಯ ಅವಿಭಾಜ್ಯ ಅಂಗವಾದ 'ನೆಕ್ಟೀ' ಕ್ರೋಷಿಯಾದಲ್ಲಿಯೇ ಹುಟ್ಟಿದ್ದೆಂದು ಪರಿಗಣಿಸಲಾಗುತ್ತದೆ. ಕ್ರೋಷಿಯಾವು ಯುರೋಪಿಯನ್ ಯೂನಿಯನ್‌ನ ಸದಸ್ಯತ್ವವನ್ನು 2013ರಲ್ಲಿ ಪಡೆಯಲಿದೆ. ಕ್ರೋಷಿಯಾದ ಕಲೆ ಮತ್ತು ಸಂಸ್ಕೃತಿಯು ಸುತ್ತಮುತ್ತಲಿನ ದೇಶಗಳ ಮಿಶ್ರವಾದ ಪ್ರಭಾವವನ್ನು ಹೊಂದಿದೆ. ಝಾಗ್ರೇಬ್ ಕ್ರೋಷಿಯಾದ ರಾಜಧಾನಿಯಾಗಿದ್ದು ಇದು ಕ್ರೋಷಿಯಾದ ವಾಯುವ್ಯ ದಿಕ್ಕಿನಲ್ಲಿದೆ ಮತ್ತು 1049 ವರ್ಷಗಳ ಇತಿಹಾಸವನ್ನು ಹೊಂದಿದೆ. ಝಾಗ್ರೇಬ್‌ನ ಕಲೆ ಮತ್ತು ಕರಕುಶಲ ಕಲೆಗಳ ಮ್ಯೂಸಿಯಂ ಅನ್ನು 1880ರಲ್ಲಿ ಸ್ಥಾಪಿಸಲಾಯಿತು ಮತ್ತು ಇಂದು ಈ ಮ್ಯೂಸಿಯಂ 1,60,000 ಕಲಾತ್ಮಕ ವಸ್ತುಗಳನ್ನು ಹೊಂದಿದೆ. ಕ್ರೋಷಿಯಾ ನೈಸರ್ಗಿಕ ಸಮೃದ್ಧತೆಯು ಪಿಟಿವೈಸ್ ನ್ಯಾಶನಲ್ ಪಾರ್ಕ್‌ನಲ್ಲಿ ನಿಖರವಾಗಿ ಮೂಡಿಬಂದಿದೆ. ಇಲ್ಲಿ 16 ಒಂದಕ್ಕೊಂದು ಹೊಂದಿಕೊಂಡಂತಿರುವ ಸರೋವರಗಳಿವೆ ಮತ್ತು ಪ್ರತಿಯೊಂದು ಸರೋವರದಲ್ಲಿಯೂ ನೀರು ಹಸಿರು, ಬೂದು ಮತ್ತು ನೀಲಿ ಮುಂತಾದ ಬೇರೆ ಬೇರೆ ಬಣ್ಣಗಳನ್ನು ಹೊಂದಿರುತ್ತದೆ.

ಎರಡನೇ ವಿಶ್ವಯುದ್ಧವು ಯುರೋಪಿನ ನಕ್ಷೆಯನ್ನು ಬದಲಾಯಿಸಿತು ಮತ್ತು ಯುರೋಪಿನಲ್ಲಿ ಕೆಲವು ಹೊಸ ದೇಶಗಳು ಹುಟ್ಟಿಕೊಂಡವು. ಝೆಕ್ ರಿಪಬ್ಲಿಕ್ ಝೆಕೋಸ್ಲೋವಾಕಿಯಾದಿಂದ ಹುಟ್ಟಿದ ಅಂತಹ ಒಂದು ದೇಶವಾಗಿರುತ್ತದೆ. ಝೆಕ್ ರಿಪಬ್ಲಿಕ್ ಸಮುದ್ರ ತೀರ ಪ್ರದೇಶವನ್ನು ಹೊಂದಿಲ್ಲ ಮತ್ತು ಪೂರ್ತಿಯಾಗಿ ಜರ್ಮನಿ, ಆಸ್ಟ್ರಿಯಾ, ಪೋಲ್ಯಾಂಡ್‌ಗಳಿಂದ ಸುತ್ತುವರಿದಿರುತ್ತದೆ. ಅಸಂಖ್ಯ ಪರ್ವತ ಶ್ರೇಣಿಗಳು, ಅರಣ್ಯ ಹಾಗೂ ಕೃಷಿ ಅಂತೆಯೇ ಐತಿಹಾಸಿಕ ಸ್ಮಾರಕಗಳು ಪ್ರವಾಸಿಗಳ ಕಣ್ಣುಗಳಿಗೆ ತಂಪೆರೆಯುತ್ತವೆ. ಇಲ್ಲಿ 100ಕ್ಕೂ ಅಧಿಕ ಐತಿಹಾಸಿಕ ಕೋಟೆಗಳಿವೆ. ಝೆಕ್ ರಿಪಬ್ಲಿಕ್‌ನ ಚಾರ್ಲ್ಸ್ ಯುನಿವರ್ಸಿಟಿಯನ್ನು ಮಧ್ಯ ಯುರೋಪ್‌ನ ಅತ್ಯಂತ ಹಳೆಯ ವಿಶ್ವವಿದ್ಯಾಲಯ ಎನ್ನಲಾಗುತ್ತದೆ. ಇದೇ ಯುನಿವರ್ಸಿಟಿಯಲ್ಲಿಯೇ 20ನೇ ಶತಮಾನದ ಮಧ್ಯಭಾಗದಲ್ಲಿ ಐನಸ್ಟೈನ್ ಪ್ರಾಧ್ಯಾಪಕರಾಗಿ ಕೆಲಸ ಮಾಡಿದ್ದರು. ಯುರೋಪ್‌ನಲ್ಲಿಯೇ ಅತ್ಯಂತ ಸುಂದರ ನಗರ ಎಂದು ಪರಿಗಣಿಸಲಾಗುವ 'ಪ್ರೇಗ್' ಈ ದೇಶದ ರಾಜಧಾನಿ. ಈ ನಗರವು ವಾಲ್ಟಾವಾ ನದಿಯ ದಂಡೆಯ ಮೇಲಿದೆ ಮತ್ತು ಪ್ರೀತಿಯಿಂದ ಈ ನಗರವನ್ನು 'ಗೋಲ್ಡನ್ ಸಿಟಿ' ಎಂದು ಕರೆಯುತ್ತಾರೆ. ಪ್ರೇಗ್‌ನ ಓಲ್ಡ್ ಟೌನ್ ಸ್ಕ್ವೇರ್ ಅನೇಕ ಐತಿಹಾಸಿಕ ಸ್ಮಾರಕಗಳಿಂದಾಗಿ ಪ್ರವಾಸಿಗಳನ್ನು ಆಕರ್ಷಿಸುತ್ತದೆ. ಈ ನಗರವು ಗಾಥಿಕ್ ಶೈಲಿಯನ್ನು ಹೊಂದಿರುವ ಟೈಟನ್ ಕೆಥಡ್ರಲ್ ಮತ್ತು ಬರೋಕ್ ಶೈಲಿಯನ್ನು ಹೊಂದಿರುವ ಸೇಂಟ್ ನಿಕೋಲಾಸ್ ಚರ್ಚ್ ಅನ್ನು ಒಳಗೊಂಡಿದೆ. ಓಲ್ಡ್ ಟೌನ್ ಹಾಲ್‌ನ ದಕ್ಷಿಣ ಭಾಗದಲ್ಲಿ ಆಸ್ಟ್ರೋನಾಮಿಕಲ್ ಕ್ಲಾಕ್ ಇದೆ. ಸ್ಥಳೀಯರು ಹೆಮ್ಮೆಯಿಂದ ಇದನ್ನು ಓರ್ಲಾಗ್ಸ್ ಎಂದು ಕರೆಯುತ್ತಾರೆ. ಈ ಗಡಿಯಾರದ ಯಂತ್ರಗಳನ್ನು 1410ರಲ್ಲಿ ತಯಾರಿಸಲಾಗಿತ್ತು. ಈ ಗಡಿಯಾರವು ತನ್ನ ಖಗೋಳೀಯ ಮುಖಬಿಲ್ಲೆ ಹಾಗೂ ಗಂಟೆಗೊಮ್ಮೆ ಪಕ್ಕದ ಚಲನೆಗೆ ಹೆಸರುವಾಸಿಯಾಗಿದೆ. ಪ್ರೇಗ್ ಕ್ಯಾಸಲ್‌ನಲ್ಲಿ ಸೇಂಟ್ ವೈಟಸ್ ಕ್ಯಾಥೆಡ್ರಲ್ ಇರುತ್ತದೆ. ಚರ್ಚ್‌ನ ಬುಡವು ಗಾಥಿಕ್ ಶೈಲಿಯನ್ನು ಹೊಂದಿದೆ ಮತ್ತು ಝೆಕ್ ರಾಜರುಗಳ ಗೋರಿಗಳನ್ನು ಹೊಂದಿರುತ್ತದೆ.

ಪೋಲೆಂಡ್ ಶಿಕ್ಷಣವು ವ್ಯಾಪಕವಾಗಿ ತಲುಪಿರುವ ದೇಶವಾಗಿದೆ. ಶಿಕ್ಷಣವನ್ನು ಗಣನೆಗೆ ತೆಗೆದುಕೊಂಡಲ್ಲಿ ಪ್ರತಿಯೊಂದು ವಿಭಾಗದಲ್ಲಿಯೂ ಪೋಲೆಂಡ್ ಮೊದಲ ಸ್ಥಾನದಲ್ಲಿದೆ. ಈ ದೇಶವು 11 ಶತಮಾನಗಳ ಪರಂಪರೆಯನ್ನು ಹೊಂದಿರುತ್ತದೆ. ಪೋಲೆಂಡ್‌ನ ಐತಿಹಾಸಿಕ ಹಾಗೂ ರಾಜಕೀಯ ಪ್ರಯಾಣವು ಹೋರಾಟದೊಂದಿಗೆ ಮುಂದುವರಿದಿದೆ. ಎರಡನೇ ವಿಶ್ವಯುದ್ಧದಲ್ಲಿ ಅತ್ಯಂತ ಹೆಚ್ಚು ಸಾವುನೋವುಗಳನ್ನು, ಹಾನಿಯನ್ನು ಅನುಭವಿಸಿದ್ದೂ ಕೂಡ ಪೋಲೆಂಡ್. ಎರಡನೇ ವಿಶ್ವಯುದ್ಧದಲ್ಲಿ ನಾಝಿಗಳು ನಡೆಸಿದ ದೌರ್ಜನ್ಯಕ್ಕೆ ಕೈಗನ್ನಡಿಯಂತಿದೆ ಆಸ್ವಿಟ್ಝ್ ಕ್ಯಾಂಪ್. ಇದು ಪೋಲೆಂಡ್ ರಾಜಧಾನಿಯಾದ ವಾರ್ಸಾದಿಂದ 286 ಕಿಲೋಮೀಟರ್ ದೂರದಲ್ಲಿದೆ. ಇದು ರುಡಾಲ್ಫ್ ಹೋಸ್ ಅವರ ವಶದಲ್ಲಿತ್ತು. ಇದೇ ಸ್ಥಳದಲ್ಲಿಯೇ ಡಾ. ಜೋಸೆಫ್ ಮೆಂಗೆಲ್ ಮಾನವೀಯತೆಗೆ ಮಸಿಬಳಿಯುವ ರೀತಿಯಲ್ಲಿ ವೈದ್ಯಕೀಯ ಪ್ರಯೋಗಗಳನ್ನು ಮಾಡಿದ್ದರು. ಪೋಲೆಂಡ್ ರಾಜಧಾನಿ ವಾರ್ಸಾ ವಿಸ್ತುಲಾ ನದಿಯ ದಡದ ಮೇಲಿದೆ. ಈ ನಗರದ ಸುಮಾರು 85% ಭಾಗ ಎರಡನೇ ವಿಶ್ವಯುದ್ಧದಲ್ಲಿ ಹಾನಿಗೊಳಗಾಗಿತ್ತು. ಆದರೆ ಮರುನಿರ್ಮಾಣದ ಭಾರೀ ಯೋಜನೆಯು ನಗರದ ಹಳೆಯ ವೈಭವವನ್ನು ಮರಳಿ ತಂದಿತು.

ಆದ್ದರಿಂದ ಯುರೋಪ್‌ನ ಎಲ್ಲೆ ಮೀರಿ ಕಣ್ಮನ ತಣಿಸುವ ಕ್ರೋಷಿಯಾ, ಸ್ಲೋವೇನಿಯಾ, ಹಂಗೇರಿ, ಝೆಕ್ ರಿಪಬ್ಲಿಕ್, ಜರ್ಮನಿ, ಪೋಲೆಂಡ್ ಮತ್ತು ಸ್ಲೋವಾಕಿಯಾಗಳಂತಹ ದೇಶಗಳನ್ನು ಭೇಟಿ ಮಾಡುವ ಕೇಸರಿಯ ಪ್ರವಾಸಕ್ಕೆ ಸೇರಿಕೊಳ್ಳಿ. ಈ ಪ್ರವಾಸವು ಜುಲೈ 26ರಂದು ನಿರ್ಗಮಿಸುತ್ತದೆ ಮತ್ತು ಸದ್ಯ ಪ್ರತಿಯೊಬ್ಬ ವ್ಯಕ್ತಿಗೆ ರೂ.10,000ದ ರಿಯಾಯ್ತಿಯನ್ನು ಒದಗಿಸುತ್ತದೆ. ಹೆಚ್ಚಿನ ವಿವರಗಳಿಗೆ 1800–22–1100ನ್ನು ಸಂಪರ್ಕಿಸಿ ಅಥವಾ www.kesari.in ಅನ್ನು ಭೇಟಿ ಮಾಡಿ.


ಜಗತ್ತು ಸಾಕಾಗುವುದಿಲ್ಲ

ನೀವು ಎಷ್ಟು ಖಂಡಗಳನ್ನು ನೋಡಿದ್ದೀರಿ?

ಇನ್ನೂ ಕಾಣದೇ ಇರುವವುಗಳನ್ನು ಕಾಣುವುದನ್ನು ಮುಂದುವರಿಸಿ

Bengaluru: 4128 2222

KESARi
World Class Travel Company



| ಕೋಡ್ | ಟೂರ್ ಹೆಸರು | ದಿನ | ದಿನಾಂಕಗಳು |
|---|---|---|---|
| V1 | ಸೌತ್ ಆಫ್ರಿಕಾ ಕೆನ್ಯ ವಿಕ್ಟೋರಿಯಾ ಫಾಲ್ಸ್ | 16 | 1,29 ಸೆಪ್ಟೆಂಬರ್ |
| J1 | ಜಪಾನ್ ಚೀನಾ | 15 | 23 ಜೂನ್ |
| A1 | ಆಸ್ಟ್ರೇಲಿಯಾ ನ್ಯೂಝಿಲ್ಯಾಂಡ್ | 20 | 29 ಸೆಪ್ಟೆಂಬರ್ |
| UC | ಬೆಸ್ಟ್ ಆಫ್ ಕೆನಡಾ | 13 | 13 ಅಗಸ್ಟ್ |
| UB | ಸೌತ್ ಅಮೇರಿಕಾ | 19 | 1 ಅಕ್ಟೋಬರ್ |
| ED | ಲ್ಯಾಂಡ್ ಆಫ್ ಮಿಡ್‌ನೈಟ್ ಸನ್ | 10 | 20 ಜುಲೈ |

*Terms & Conditions Apply. Advt.

www.kesari.in • SMS KESARI <space> your message to 56677 • Toll free 1800 22 1100